ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ರಾಜ್ಯ ಸರ್ಕಾರ ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ಬಂಡವಾಳ ಹಾಗೂ ಡಿವಿಡೆಂಟ್ ವಿತರಣೆ

ಶ್ರೀ ಕೆ. ಎ. ತಿಪ್ಪೇಸ್ವಾಮಿ(ನಾಮಿನಿರ್ದೇಶನ ಹೊಂದಿದವರು) –

722 (860) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಒಟ್ಟು ಸಾರ್ವಜನಿಕ ಉದ್ಯಮಗಳೆಷ್ಟು; (ವಿವರ ನೀಡುವುದು)

(ಆ) ಈ ಉದ್ಯಮಗಳಲ್ಲಿ ರಾಜ್ಯ ಸರ್ಕಾರ ಹೂಡಿರುವ ಬಂಡವಾಳವೆಷ್ಟು; (ವಿವರ ನೀಡುವುದು)

(ಇ) ಕಳೆದ 3 ವರ್ಷಗಳಲ್ಲಿ ಎಷ್ಟು ಉದ್ಯಮಗಳು ಸರ್ಕಾರದ ಹೂಡಿಕೆಯನ್ನು ಹಿಂದಿರುಗಿಸಿವೆ ಮತ್ತು ಹೂಡಿಕೆಯ ಮೇಲೆ ಡಿವಿಡೆಂಡ್ ನೀಡಿವೆ; (ವಿವರ ನೀಡುವುದು)

(ಈ) ಮೇಲಿನ ಉದ್ಯಮಗಳು ಕಂಪನಿ ಸಾಮಾಜಿಕ ಜವಾಬ್ದಾರಿ (Company Social Responsibility) ಅಡಿಯಲ್ಲಿ ವಿವಿಧೋದ್ದೇಶಗಳಿಗೆ ಹಂಚಿಕೆ ಮಾಡಿರುವ ದ್ರವ್ಯದ ಪ್ರಮಾಣವೆಷ್ಟು? (ವಿವರ ನೀಡುವುದು)